**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂ: ಡಿಟಿಇ/25/ಐಎನ್‌ಎಸ್(3)/2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ: 10-05-2017

**ಜ್ಞಾಪನ**

ವಿಷಯ: ನವೆಂಬರ್-ಡಿಸೆಂಬರ್ 2016ರ ಡಿಪ್ಲೋಮಾ ಪರೀಕ್ಷೆಯ ವಿಷಯವಾರು ಫಲಿತಾಂಶದ ವಿಶ್ಲೇಷಣೆ ಬಗ್ಗೆ.

ಉಲ್ಲೇಖ; 1. ನಿರ್ದೇಶನಾಲಯದ ಪತ್ರ ಸಂ: ಡಿಟಿಇ/25/ಐಎನ್‌ಎಸ್(3)/2016, ದಿನಾಂಕ: 24.01.2017
2. ಇದೇ ಸಮಸಂಖ್ಯೆ ಪತ್ರ ದಿ: 14.02.2017 ಮತ್ತು 23.03.2017
2. ಸರ್ಕಾರದ ಆದೇಶ ಸಂ: ಇಡಿ 190 ಟಿಪಿಇ 2011, ದಿನಾಂಕ: 13.03.2012

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಯ 165 ನೇ ಕೇಂದ್ರ ಸಭೆಯಲ್ಲಿ ನವೆಂಬರ್-ಡಿಸೆಂಬರ್ 2016 ರ ಡಿಪ್ಲೋಮಾ ಪರೀಕ್ಷಾ ಫಲಿತಾಂಶವನ್ನು ಅವಲೋಕಿಸಿದಾಗ, ಹಲವಾರು ವಿಷಯಗಳಲ್ಲಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವುದು ಕಂಡುಬಂದಿದ್ದು, ಈ ಹಿನ್ನೆಲೆಯಲ್ಲಿ ಶೇಕಡ 50ಕ್ಕಿಂತಲೂ ಕಡಿಮೆ ಫಲಿತಾಂಶ ಬಂದಿರುವ ಥಿಯರಿ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನಿರ್ದೇಶನಾಲಯದ ವೆಬ್‌ಸೈಟ್ ಮುಖಾಂತರ ನಿಗದಿಪಡಿಸಿದ ನಮೂನೆಯಲ್ಲಿ ನೀಡಲು ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರಿಗೆ ಆದೇಶಿಸಲಾಗಿದ್ದರೂ ಸಹ ಇಲ್ಲಿಯವರೆಗೂ ಅನುಬಂಧ-1ರಲ್ಲಿ ನಮೂದಿಸಿರುವ 02 ಸರ್ಕಾರಿ ಮತ್ತು 04 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರುಗಳು ಸದರಿ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

ಆದ್ದರಿಂದ ಉಲ್ಲೇಖ(1)ರಲ್ಲಿ ತಿಳಿಸಿರುವಂತೆ ತಮ್ಮ ಸಂಸ್ಥೆಯ ಮಾಹಿತಿಯನ್ನು ಅನುಬಂಧ-2ರಲ್ಲಿ ಭರ್ತಿ ಮಾಡಿ ಸಲ್ಲಿಸಲು ಹಾಗೂ ಉಲ್ಲೇಖ(2)ರಲ್ಲಿ ತಿಳಿಸಿರುವಂತೆ ನವೆಂಬರ್-ಡಿಸೆಂಬರ್ 2016ರ ಡಿಪ್ಲೋಮಾ ಪರೀಕ್ಷೆಯಲ್ಲಿ ಯಾವ ವಿಷಯದಲ್ಲೂ 50%ಗಿಂತ ಕಡಿಮೆ ಫಲಿತಾಂಶ ಇಲ್ಲದಿದ್ದ ಪಕ್ಷದಲ್ಲಿ **"ಯಾವ ವಿಷಯದಲ್ಲೂ 50%ಗಿಂತ ಕಡಿಮೆ ಫಲಿತಾಂಶ ಬಂದಿರುವುದಿಲ್ಲ"**ವೆಂಬ ಮಾಹಿತಿಯನ್ನು ಜಂಟಿ ನಿರ್ದೇಶಕರು(ತನಿಖೆ) ಇವರಿಗೆ ಕೂಡಲೇ ಕಳುಹಿಸಿಕೊಡಲು ಪ್ರಾಂಶುಪಾಲರಿಗೆ ಈ ಮೂಲಕ ಆದೇಶಿಸಲಾಗಿದೆ. ತಪ್ಪಿದಲ್ಲಿ ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ಜಂಟಿ ನಿರ್ದೇಶಕರು (ತನಿಖೆ)

**ಅಡಕ:** ಅನುಬಂಧ-1 ಮತ್ತು 2

**ಇವರಿಗೆ ಮುಂದಿನ ಅಗತ್ಯ ಕ್ರಮಕ್ಕೆ:**
ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರಿಗೆ.

# ಅನುಬಂಧ–1

## 2016–17ನೇ ಸಾಲಿನ ನವೆಂಬರ್/ಡಿಸೆಂಬರ್‌ನಲ್ಲಿ ನಡೆದ ಪರೀಕ್ಷೆಗಳಲ್ಲಿ ಶೇಕಡ 50ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ವಿಷಯಗಳ ಮತ್ತು ಬೋಧಿಸಿದ ಉಪನ್ಯಾಸಕರುಗಳ ವಿವರಗಳನ್ನು ಸಲ್ಲಿಸದೇ ಇರುವ ಸಂಸ್ಥೆಗಳು

| ಕ್ರ ಸಂ. | ಕೋಡ್ | ಪಾಲಿಟೆಕ್ನಿಕ್‌ನ ಹೆಸರು |
|---|---|---|
| ಸರ್ಕಾರಿ ಪಾಲಿಟೆಕ್ನಿಕ್ | | |
| 1. | 126 | ಸರ್ಕಾರಿ ಮುದ್ರಣ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು |
| 2. | 184 | ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ |
| ಅನುದಾನಿತ ಪಾಲಿಟೆಕ್ನಿಕ್ | | |
| 1. | 204 | ಎಂಇಐ ಪಾಲಿಟೆಕ್ನಿಕ್, ಬೆಂಗಳೂರು |
| 2. | 207 | ಎಂಇಐ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು |
| 3. | 307 | ಕೆಸಿಟಿ ಪಾಲಿಟೆಕ್ನಿಕ್, ಕಲಬುರಗಿ |
| 4. | 210 | ಜೆಎಸ್‌ಎಸ್ ಪಾಲಿಟೆಕ್ನಿಕ್, ನಂಜನಗೂಡು |

ಜಂಟಿ ನಿರ್ದೇಶಕರು(ತನಿಖೆ)

10/5/17

<u>ಅನುಬಂಧ–2</u>

## ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳ ವಿಷಯವಾರು (ಥಿಯರಿ) ಫಲಿತಾಂಶ ವಿಶ್ಲೇಷಣಾ ನಮೂನೆ

ಪಾಲಿಟೆಕ್ನಿಕ್‌ನ ಹೆಸರು: ಸಂಸ್ಥೆಯ ಕೋಡ್:

ಪರೀಕ್ಷೆ : ನವೆಂಬರ್–ಡಿಸೆಂಬರ್ 2016

| ಕ್ರ. ಸಂ. | ಸೆಮಿಸ್ಟರ್ | ವಿಭಾಗ | ವಿಷಯ | ವಿಷಯ ಸಂಕೇತ | ಫಲಿತಾಂಶ | | | | | | | ವಿಷಯವನ್ನು ಬೋಧಿಸಿರುವ ಉಪನ್ಯಾಸಕರ ಹೆಸರು | ಪದನಾಮ | ಸಹಿ | ಷರಾ |
|---|---|---|---|---|---|---|---|---|---|---|---|---|---|---|---|
| | | | | | ರೆಗ್ಯುಲರ್ ಅಭ್ಯರ್ಥಿಗಳು | | | | ಸಪ್ಲಿಮೆಂಟರಿ ಅಭ್ಯರ್ಥಿಗಳು | | | | | | |
| | | | | | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಫಲಿತಾಂಶ % | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಫಲಿತಾಂಶ % | | | | |
| 1. | | | | | | | | | | | | | | | |
| 2. | | | | | | | | | | | | | | | |
| 3. | | | | | | | | | | | | | | | |

ವಿಭಾಗಾಧಿಕಾರಿ ಸಹಿ ಪ್ರಾಂಶುಪಾಲರ ಸಹಿ